# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL/2005/16123 ಸೆಪ್ಟಂಬರ್ - 2020 ಪುಟ:8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ-9 ಪ್ರಕಟಣೆ : 10-09-2020



● e-mail : jnanashakthisss@gmail.com ● whatsapp : 7795116598 ● Mobile : 9343361618

## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ

ಮನುಷ್ಯನು ಭಗವಂತನಲ್ಲಿ ಯಾವಾಗಲೂ ನಂಬಿಕೆ ಇಡಬೇಕು. ತನ್ನನ್ನು ನಂಬಿದವರನ್ನು ಎಂದಿಗೂ ಕೈಬಿಡುವುದಿಲ್ಲವೆಂದು ಭಗವಂತನು ಗೀತೆಯಲ್ಲಿ ಅಭಯವನ್ನು ನೀಡಿರುವನು. ಭಕ್ತಿಭಾವವು ಸಮಯ ಕಳೆದಂತೆ ತೀವ್ರವಾಗಬೇಕೇ ಹೊರತು ಕಡಿಮೆಯಾಗಬಾರದು.

ಕರ್ಮಫಲವನ್ನು ಅನುಭವಿಸುತ್ತಿರುವೆವು ಎಂಬ ದೃಢವಾದ ನಂಬಿಕೆಯಿಂದ ಫಲಾಪೇಕ್ಷೆ ಇಲ್ಲದೆ ಕರ್ತವ್ಯನಿರತರಾಗಿದ್ದರೆ, ಯಾವುದೇ ಕಾರಣದಿಂದಲೂ ನಮ್ಮ ನಂಬಿಕೆಯು ಸಡಿಲವಾಗುವುದಿಲ್ಲ. ಆದುದರಿಂದ ರಾಮಾಯಣ, ಮಹಾಭಾರತ ಮತ್ತು ಭಾಗವತಗಳನ್ನು ಕುರಿತು ಪ್ರವಚನಗಳು ನಡೆಯುವ ಸ್ಥಳಗಳಿಗೆ ತಪ್ಪದೇ ಹೋಗಿ ಭಗವಂತನ ಲೀಲೆಗಳನ್ನು ಆಲಿಸಬೇಕು. ಇದರಿಂದ ಸಾಧಕನ ಭಕ್ತಿಭಾವವು ದೃಢವಾಗುವುದು.

**ಯತ್ರೋತ್ತಮಶ್ಲೋಕ ಗುಣಾನುವಾದಃ ಪ್ರಸ್ತೂಯತೇ ಗ್ರಾಮ್ಯ ಕಥಾವಿಘಾತಃ ।**
**ನಿಷೇವ್ಯಮಾಣೋಽನುದಿನಂ ಮುಮುಕ್ಷೋರ್ಮತಿಂ ಸತೀಂ ಯಚ್ಛತಿ ವಾಸುದೇವೇ ॥**

ನಮ್ಮ ಶಾಸ್ತ್ರಗಳು ಭಕ್ತಿಗೆ ಹೆಚ್ಚು ಪ್ರಾಮುಖ್ಯವನ್ನು ನೀಡಿವೆ. ಪರಮಾತ್ಮನನ್ನು ಕುರಿತು ಅಚಲವಾದ ಭಕ್ತಿಯು ಮನುಷ್ಯನಿಗೆ ಮೋಕ್ಷವನ್ನು ದೊರಕಿಸಿಕೊಡುವುದು.

**ತಸ್ಮಾನ್ನರೋ ಸಂಗಸುಸಂಗಜಾತ ಜ್ಞಾನಾಸಿನೇಹೈವ ವಿವೃಕ್ಣಮೋಹಃ ।**
**ಹರಿಂ ತದೀಹಾಕಥನ ಶೃತಾಭ್ಯಾಂ ಲಬ್ಧಸ್ಮೃತಿರ್ಯಾತ್ಯತಿ ಪಾರಮಧ್ವನಃ ॥**

ಆದುದರಿಂದ ಜ್ಞಾನವೆಂಬ ಖಡ್ಗದಿಂದ ಅಜ್ಞಾನವನ್ನು ತುಂಡರಿಸಿ ಈ ಜನ್ಮದಲ್ಲಿಯೇ ಮನುಷ್ಯನು ಮೋಕ್ಷವನ್ನು ಹೊಂದಬೇಕಾದಲ್ಲಿ, ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನು ಇಟ್ಟುಕೊಳ್ಳುವುದರಿಂದ ಮಾತ್ರ ಸಾಧ್ಯವಾಗುವುದು ಎಂದು ಖಚಿತವಾಗಿ ಹೇಳಬಹುದು.

ಭಗವಂತನ ಲೀಲೆಯನ್ನು ಆಲಿಸುತ್ತ ಶ್ರದ್ಧೆ-ಭಕ್ತಿಯಿಂದ ಮನುಷ್ಯನು ಬಂಧಮುಕ್ತನಾಗಿ ಸಂಸಾರ ಸಾಗರವನ್ನು ದಾಟಬಹುದು.

*ಕೃಪೆ : 'ಶ್ರೀ ಶಂಕರ ಕೃಪಾ'*


## ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಉನ್ನತ ಶ್ರೇಣಿಯನ್ನು ಪಡೆದು ನಮ್ಮ ಸಮಾಜಕ್ಕೆ ಗೌರವ ತಂದ ವಿದ್ಯಾರ್ಥಿಗಳು



**ಕು। ನಿಧಿ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 99.84 (624/625) ಅಂಕಗಳಿಸಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾಳೆ. ಇವಳು ಶ್ರೀ ಜಯಚಂದ್ರ ಬಿ. ವಿ. ಮತ್ತು ಶ್ರೀಮತಿ ಸ್ವಪ್ನಾರವರ ಸುಪುತ್ರಿ ಹಾಗೂ ಮಂಗಳೂರಿನ ಕೆನರಾ ಹೈಸ್ಕೂಲಿನ ವಿದ್ಯಾರ್ಥಿನಿ.



**ಚಿ। ಕೆ. ಕೌಶಿಕ್ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 99.68 (623/625) ಅಂಕಗಳಿಸಿ ರಾಜ್ಯಕ್ಕೆ ತೃತೀಯ ರ್‍ಯಾಂಕ್ ಗಳಿಸಿದ್ದಾನೆ. ಇವನು ಕಡಬ ಶ್ರೀ ಚಿತ್ತರಂಜನ್ ರಾವ್ ಮತ್ತು ಶ್ರೀಮತಿ ಸಂಧ್ಯಾ ರಾವ್‌ರವರ ಸುಪುತ್ರ ಹಾಗೂ ಕಡಬದ ರಾಮಕುಂಜೇಶ್ವರ ಹೈಸ್ಕೂಲಿನ ವಿದ್ಯಾರ್ಥಿ.



**ಚಿ। ಸಾತ್ವಿಕ ಅಡೂರು** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 99.5 (622 / 625) ಅಂಕಗಳಿಸಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಗಳಿಸಿದ್ದಾನೆ. ಇವನು ಡಾ. ಸಂತೋಷ್ ಅಡೂರು ಮತ್ತು ಡಾ. ಗೀತಾ ಅಡೂರು ಇವರ ಸುಪುತ್ರ ಹಾಗೂ ಬೇಲೂರಿನ ಪೂರ್ಣಪ್ರಜ್ಞ ಎಜ್ಯುಕೇಶನ್ ಸೆಂಟರ್‌ನ ವಿದ್ಯಾರ್ಥಿ.

### ಪ್ರತಿಭಾ ಪುರಸ್ಕಾರ

2019-2020ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪದವಿಪೂರ್ವ (ಪಿ.ಯು.ಸಿ.) ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ಮುಂಬರುವ ದಿನಗಳಲ್ಲಿ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 15-10-2020ರ ಒಳಗಾಗಿ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ವಿನಂತಿಸುತ್ತೇವೆ.

**ಹೆಚ್ಚಿನ ಮಾಹಿತಿಗಾಗಿ : ಕೆ. ಸದಾಶಿವ ಶಾಸ್ತ್ರೀ ಮೊಬೈಲ್ : 8762235801**

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :

**ಎಂ. ಎಸ್. ರಘುನಾಥ ರಾವ್, ಪುತ್ತೂರು**

ಮೊಬೈಲ್ : 9448481696

ಸಂಪಾದಕರು :

**ಪಿ. ಶ್ರೀಕಾಂತ ರಾವ್**

ಮೊಬೈಲ್ : 9343361618

ಸಂಪಾದಕ ಮಂಡಳಿ :

**ನಾಗರಾಜ್ ವರ್ಕಾಡಿ**

**ರಘುವೀರ್ ಪೆರ್ಡೂರು**

**ಟಿ. ಬಿ. ಮೋಹನ್ ರಾವ್**

**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :

**ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :

**ಚೇತನ್ ಶರ್ಮ**

**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**


## ಪ್ರತಿಷ್ಠಿತ ಕರ್ಣಾಟಕ ಬ್ಯಾಂಕ್ ಲಿ. ಇದರ ಆಡಳಿತ ಮಂಡಳಿಯ ನಿರ್ದೇಶಕರಾಗಿ ಸರಕಾರದಿಂದ ಶ್ರೀ ಪಂಜ ಪ್ರದೀಪ್ ಕುಮಾರ್ ನೇಮಕ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಪಂಜ ಪ್ರದೀಪ್ ಕುಮಾರ್ ಅವರು ಪ್ರತಿಷ್ಠಿತ ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಇದರ ಆಡಳಿತ ಮಂಡಳಿಯ ನಿರ್ದೇಶಕ (Director)ರಾಗಿ ಇತ್ತೀಚೆಗೆ ಸರಕಾರದಿಂದ ನೇಮಕಗೊಂಡಿರುವುದು ಸಮಾಜಕ್ಕೆ ಅತ್ಯಂತ ಪ್ರತಿಷ್ಠೆ ಹಾಗೂ ಗೌರವದ ವಿಚಾರವಾಗಿದೆ. ಭಾರತ ಸರಕಾರವು ಇವರನ್ನು ಬ್ಯಾಂಕ್ ಬೋರ್ಡ್ ಬ್ಯೂರೋ (Bank Board Bureau)ದ ಸದಸ್ಯರಾಗಿಯೂ ನೇಮಕಗೊಳಿಸಿದ್ದು ಇದು ಸರಕಾರದ ಸಾರ್ವಜನಿಕ ಸಂಸ್ಥೆಯ ಬ್ಯಾಂಕ್‌ಗಳಿಗೆ ಸಲಹೆ ನೀಡುವ ಸಮಿತಿಯಾಗಿರುತ್ತದೆ.

1976ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪ್ರೊಬೇಶನರಿ ಅಧಿಕಾರಿ (Probationary Officer)ಯಾಗಿ ನೇಮಕಗೊಂಡ ಶ್ರೀಯುತರು ತನ್ನ ಅಪ್ರತಿಮ ಸಾಧನೆಯಿಂದ ಹಾಗೂ ಬದ್ಧತೆಯಿಂದ ಹಂತ ಹಂತವಾಗಿ ಉನ್ನತೀಕರಣಗೊಂಡು 2013ರಲ್ಲಿ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ (Managing Director) ಆಗಿ ನೇಮಕಗೊಂಡಿದ್ದರು. 2013ರಿಂದ 2015ರ ಅವಧಿಯಲ್ಲಿ ಚೆನ್ನೈ, ಬೆಂಗಳೂರು, ಮೈಸೂರು, ಮುಂಬೈ ಹಾಗೂ ನ್ಯೂಯಾರ್ಕ್ ನಗರಗಳಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪ್ರಮುಖ ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದರು. ಶ್ರೀಯುತರು 2001ರಿಂದ 2011ರ ವರೆಗೆ ಹತ್ತು ವರ್ಷಗಳ ಕಾಲ ಸ್ಟೇಟ್ ಬ್ಯಾಂಕ್ ಆಫ್ ತಿರುವನಂತಪುರ (Travancore)ದಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ (M. D.) ಆಗಿ ಕೆಲಸ ನಿರ್ವಹಿಸಿದ್ದರು.

ಪಂಜ ಶ್ರೀ ಭಾಸ್ಕರ ರಾವ್ ಮತ್ತು ಶ್ರೀಮತಿ ಸರೋಜಿನಿ ಬಿ. ರಾವ್ ಅವರ ಪುತ್ರರಾಗಿ ಶ್ರೀ ಪ್ರದೀಪ್ ಕುಮಾರ್ ಅವರು 1955ನೇ ಅಕ್ಟೋಬರ್ 2ರಂದು ಕಾರ್ಕಳದಲ್ಲಿ ಜನಿಸಿದರು. ತಮ್ಮ ಸಂಪೂರ್ಣ ವಿದ್ಯಾಭ್ಯಾಸವನ್ನು ಮದ್ರಾಸ್ (ಚೆನ್ನೈ)ನಲ್ಲಿ ಪಡೆದು ಮದ್ರಾಸ್ ವಿಶ್ವವಿದ್ಯಾಲಯದಿಂದ Statisticsನಲ್ಲಿ ಉನ್ನತ ಪದವಿಯನ್ನು ಪಡೆದವರು.

ಶ್ರೀಯುತರು ಹಲವಾರು ಸಾರ್ವಜನಿಕ ಸೇವಾಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದಾರೆ. ಪ್ರಸ್ತುತ 60 ವರ್ಷಗಳ ಹಿರಿಯ ಸೇವಾಸಂಸ್ಥೆ (NGO) ವಿಕಲಚೇತನರ ಸಂಘ (Association of People with Disabilities)ದ ಗೌರವ ಕಾರ್ಯದರ್ಶಿಯಾಗಿದ್ದಾರೆ.

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಕಟ್ಟಡ ನಿರ್ಮಾಣದಲ್ಲಿ ಇವರು ಸಕ್ರಿಯವಾಗಿ ಪಾಲ್ಗೊಂಡದ್ದನ್ನು ಇಲ್ಲಿ ನೆನಪಿಸುತ್ತೇವೆ.

ಶ್ರೀಯುತರಿಗೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರು ಆಯುರಾರೋಗ್ಯವನ್ನಿತ್ತು ರಕ್ಷಿಸಲಿ. ಅವರು ತಮ್ಮ ಮುಂದಿನ ಬದುಕಿನಲ್ಲಿ ಇನ್ನಷ್ಟು ಯಶಸ್ಸನ್ನು ಕಾಣಲಿ ಎಂದು 'ಜ್ಞಾನಶಕ್ತಿ ಪತ್ರಿಕಾ ಬಳಗ'ವು ಹಾರೈಸುತ್ತದೆ.

## 'ಶಿವಸದನ'ಕ್ಕೆ ಕೊಡುಗೆ



ಶ್ರೀ ಸುಬ್ರಹ್ಮಣ್ಯ ಸಭಾದ ಮಂಗಳೂರಿನ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯಕ್ಕೆ **ಮಂಗಳೂರಿನ ಶ್ರೀ ಶ್ರೀನಿವಾಸ ಮತ್ತು ಶ್ರೀಮತಿ ಪುಷ್ಪಾವತಿ** ದಂಪತಿಗಳು **'ವಾಟರ್ ಬೆಡ್'**ನ್ನು ಕೊಡುಗೆಯಾಗಿ ನೀಡಿದ್ದಾರೆ. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್‌ಕುಮಾರ್ ಅದನ್ನು ಸ್ವೀಕರಿಸಿ ಅಭಿನಂದನೆ ಸಲ್ಲಿಸಿದರು.


ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail, Mangaluru - 3
CUSTOMER'S SATISFACTION IS OUR MOTTO

**ರಾಮಾ ಆಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

**PRAVEEN KUMAR ADYAPADY**
**NOTARY & ADVOCATE**

| MANGALORE OFFICE | BAJPE OFFICE |
|---|---|
| JANVI PLAZA, IInd FLOOR | OZANAM COMPLEX, IInd FLOOR |
| BUNTS HOSTEL, MANGALORE | CHURCH BUILDING, MAIN ROAD, BAJPE |

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಸಂಘದಿಂದ ಹೆಬ್ಬೂರು ಕೋದಂಡಾಶ್ರಮದ ಭೇಟಿ







ಹೆಬ್ಬೂರಿನ ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ವತಿಯಿಂದ ಹೊರೆಕಾಣಿಕೆ, ಪಾದಪೂಜೆ, ಭಿಕ್ಷಾವಂದನೆ ಸಮರ್ಪಿಸಿ ಫಲ–ಮಂತ್ರಾಕ್ಷತೆ ಪಡೆಯಲಾಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರು, ಶ್ರೀ ಸಿ.ಎ. ನಾಗರಾಜ ಶರ್ಮ ಭಾಗವಹಿಸಿ ಕೃತಾರ್ಥರಾದರು.

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ವತಿಯಿಂದ ‘ಉಪಾಕರ್ಮ’







ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಇದರ ವತಿಯಿಂದ ‘ಉಪಾಕರ್ಮ’ ತಾ. 31-8-2020ನೇ ಸೋಮವಾರ ‘ಸದನ’ದಲ್ಲಿ ನಡೆಯಿತು. ವೇ. ಮೂ. ಪಾವಂಜೆ ಜಗದೀಶ್ ಉಪಾಧ್ಯಾಯರು ‘ಉಪಾಕರ್ಮ ಹೋಮ’ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿದರು. ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಪದಾಧಿಕಾರಿಗಳು, ನಿರ್ದೇಶಕರುಗಳು, ಸದಸ್ಯರುಗಳು ಸೇರಿದಂತೆ ಸುಮಾರು 60 ಜನ ಸಮಾಜ ಬಾಂಧವರು ಸಾಮಾಜಿಕ ಅಂತರ ಕಾಯ್ದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಡಾ. ನಂದಕಿಶೋರ್ ಕಾರ್ಯಕ್ರಮದ ಖರ್ಚು–ವೆಚ್ಚಗಳನ್ನು ಪ್ರಾಯೋಜಿಸಿ ಸಹಕರಿಸಿದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಧನ್ಯವಾದ ಸಮರ್ಪಿಸಿದರು.

**ಚಿತ್ರಗಳು : ರಘುವೀರ್ ಪೆರ್ಡೂರು**

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನದಲ್ಲಿ ಉಪಾಕರ್ಮ ಕಾರ್ಯಕ್ರಮ



ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನದಲ್ಲಿ ತಾರೀಕು 31-08-2020ನೇ ಸೋಮವಾರ ಉಪಾಕರ್ಮ ಕಾರ್ಯಕ್ರಮವು ಪುರೋಹಿತರಾದ ಶ್ರೀ ಶಿವ ಭಟ್‌ರವರ ನೇತೃತ್ವದಲ್ಲಿ ಜರಗಿತು. ಈ ಕಾರ್ಯಕ್ರಮದಲ್ಲಿ ಪಡುಬಿದ್ರಿ ಸೇರಿದಂತೆ ನಂದಿಕೂರು, ಎಲ್ಲೂರು, ಪಾದೆಬೆಟ್ಟು ಗ್ರಾಮದ 25 ಜನ ಸಮಾಜ ಬಾಂಧವರು ಭಾಗವಹಿಸಿದರು.

ಈ ಸಂಧರ್ಭದಲ್ಲಿ ಶೃಂಗೇರಿ ಮಠದ ಉಡುಪಿ ವಲಯದ ಧರ್ಮಾಧಿಕಾರಿ ಹಾಗೂ ಕ್ಷೇತ್ರದ ತಂತ್ರಿಯವರಾದ ಶ್ರೀ ವಾಗೀಶ ಶಾಸ್ತ್ರೀಯವರ ಸೂಚನೆ ಮೇರೆಗೆ ಸಮಾಜ ಬಾಂಧವರು ಶೃಂಗೇರಿ ಗುರುಪೀಠಕ್ಕೆ ಗುರುಕಾಣಿಕೆಯನ್ನು ಶ್ರೀ ಜಗದಾಭಿರಾಮ ಸ್ವಾಮಿಯವರ ಮುಖಾಂತರ ಅರ್ಪಿಸಿದರು.

**ವರದಿ : ಶ್ರೀ ಶ್ರೀನಿವಾಸ್ ಶರ್ಮ, ಪಾದೆಬೆಟ್ಟು**

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ - ಅರ್ಚಕರ ಪರಿಪಾಲನಾ ಸಭಾ, ಮಂಗಳೂರು

### ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ



ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ – ಅರ್ಚಕರ ಪರಿಪಾಲನಾ ಸಭಾ, ಮಂಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಇದರ ವತಿಯಿಂದ ಈ ವರ್ಷದ **ಋಗುಪಾಕರ್ಮ**ವನ್ನು ಬೈಂದೂರು ತಾಲೂಕಿನ ನಮ್ಮ ಸಮಾಜ ಬಾಂಧವರಿಗಾಗಿ ಸಂಘದ ಉಪಾಧ್ಯಕ್ಷರಾದ ವೇದಮೂರ್ತಿ ಚಿದಾನಂದ ಶ್ಯಾನುಭೋಗ್ ಕಿರಿಮಂಜೇಶ್ವರ ಇವರು ತಮ್ಮ ಸ್ವಗೃಹ ‘ಈಶಾವಾಸ್ಯಮ್’ದಲ್ಲಿ ಆಯೋಜಿಸಿದ್ದರು. ನಮ್ಮ ಎಲ್ಲಾ ಸಮಾಜ ಬಾಂಧವರು ಹೋಮದಲ್ಲಿ ಪಾಲ್ಗೊಂಡು, ನೂತನ ಉಪವೀತವನ್ನು ಧರಿಸಿದರು.

**ವರದಿ : ಶ್ರೀ ಚಿದಾನಂದ ಶ್ಯಾನುಭೋಗ್**

# *** ಅಪಾರ ಕೀರ್ತಿ ಗಳಿಸಿ ***



**ಕು। ಎಂ. ಎನ್. ಸಂಜನ ರಾವ್** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗ ಪರೀಕ್ಷೆಯಲ್ಲಿ ಶೇ. 92.6% (556/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಾಂಟ್ರಾಡಿ ಶ್ರೀ ನಾಗರಾಜ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ಅವರ ಸುಪುತ್ರಿ ಹಾಗೂ ಮುಲ್ಕಿಯ Madeleine Collegeನ ವಿದ್ಯಾರ್ಥಿನಿ.



**ಕು। ಪ್ರಾರ್ಥನಾ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 96% (600/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಹೊಂದಿದ್ದಾಳೆ. ಇವಳು ಶ್ರೀ ಅನಿಲ್ ರಾವ್ ಬಿ. ಎಸ್. ಮತ್ತು ಶ್ರೀಮತಿ ಭಾರತೀ ರಾವ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಡೊಂಗರಕೇರಿ ಕೆನರಾ ಗರ್ಲ್ಸ್ ಹೈಸ್ಕೂಲಿನ ವಿದ್ಯಾರ್ಥಿನಿ.

**ಚಿ। ಆಸ್ಮಿತ್ ಬಿ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 98% (613/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಮಂಗಳೂರಿನ ಉರ್ವದ ಶ್ರೀ ಭಾರತಿ ಇಂಗ್ಲಿಷ್ ಮೀಡಿಯಂ ಶಾಲೆಯ ವಿದ್ಯಾರ್ಥಿ ಹಾಗೂ ಶ್ರೀ ರಾಜೇಶ ರಾವ್ ಮತ್ತು ಶ್ರೀಮತಿ ಶುಭಾರವರ ಸುಪುತ್ರ.



**ಕು। ರಶ್ಮಿ ಎನ್.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 96.6 (604/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಡಾ. ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಕರುಣಾರವರ ಸುಪುತ್ರಿ ಹಾಗೂ ಮಂಗಳೂರಿನ ಜೆಪ್ಪು ಸೈಂಟ್ ಜರೋಸಾ ಹೈಸ್ಕೂಲಿನ ವಿದ್ಯಾರ್ಥಿನಿ.





**ಚಿ। ಸಮರ್ಥ ಎನ್.** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 91.8 (551/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಹರೀಶ್ ಎನ್. ಮತ್ತು ಶ್ರೀಮತಿ ಪ್ರಜ್ವಲಾರವರ ಸುಪುತ್ರ ಹಾಗೂ ಪುತ್ತೂರಿನ ಅಂಬಿಕಾ ವಿದ್ಯಾಲಯದ ವಿದ್ಯಾರ್ಥಿ.



**ಕು। ಅದಿತಿ ದಿನಮಣಿ ಭಟ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 96.3 (578/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ನಾರಾವಿ ಬಲ್‌ಪಂತಿ ಶ್ರೀ ದಿನಮಣಿ ಭಟ್ ಮತ್ತು ಅಡೂರು ಶ್ರೀಮತಿ ಅನುರಾಧಾ ಭಟ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಶಾರದಾ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ.

**ಚಿ। ಕೆ. ಈಶನ್ ರಾವ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 92.8 (557/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕಡಬ ಶ್ರೀ ಶಿವಾನಂದ ರಾವ್ ಮತ್ತು ಶ್ರೀಮತಿ ವಾಣಿಶ್ರೀ ರಾವ್‌ರವರ ಸುಪುತ್ರ ಹಾಗೂ ಮಂಗಳೂರಿನ ಶಾರದಾ ವಿದ್ಯಾಲಯದ ವಿದ್ಯಾರ್ಥಿ.



**ಕು। ಸ್ಮಿತಾ ಸಿ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 95 (594/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಚಂದ್ರಶೇಖರ್ ಸಿ. ಮತ್ತು ಶ್ರೀಮತಿ ಜಯಲಕ್ಷ್ಮೀಯವರ ಸುಪುತ್ರಿ ಹಾಗೂ ಸುರತ್ಕಲ್‌ನ ವಿದ್ಯಾದಾಯಿನಿ ಪ್ರೌಢಶಾಲೆಯ ವಿದ್ಯಾರ್ಥಿನಿ.





**ಕು। ಸಿಂಚನಾ ಕೆ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 92.6 (579/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕೈೂಲ ಶ್ರೀ ರವಿಕಿರಣ ಮತ್ತು ಶ್ರೀಮತಿ ಪದ್ಮಿನಿಯವರ ಸುಪುತ್ರಿ ಹಾಗೂ ಸೈಂಟ್ ಮೇರಿ ಇಂಗ್ಲಿಷ್ ಮೀಡಿಯಂ ಸ್ಕೂಲ್, ಉಪ್ಪಿನಂಗಡಿಯ ವಿದ್ಯಾರ್ಥಿನಿ.



**ಕು। ನಿಖಿತಾ ರಾವ್** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಶೇ. 92.6 (556/600) ಅಂಕಗಳಿಸಿ ಉನ್ನತಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕರಂದಾಡಿ ಶ್ರೀ ರಾಘವೇಂದ್ರ ರಾವ್ ಮತ್ತು ಶ್ರೀಮತಿ ರಮಾದೇವಿ ರಾವ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಸೈಂಟ್ ಅಲೋಶಿಯಸ್ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ.


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –

**G. K. KOLPE**
**House No. 7-3-31-D1,'Vaishnavi' (Upstairs)**
**Vadiraja 2nd Cross, Bailakere, Udupi - 576 101**
**Mobile : 9449903002**

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com

# *** ಅಪಾರ ಕೀರ್ತಿ ಗಳಿಸಿ ***



ಬೆಂಗಳೂರಿನ **ಕು। ಸಂಜನಾ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 98.6 (592/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಯಲಹಂಕದ ಅನಾರು ಶ್ರೀ ಯೋಗೀಶ್ ರಾವ್ ಮತ್ತು ಶ್ರೀಮತಿ ಸುಮನಾ ರಾವ್‌ರವರ ಸುಪುತ್ರಿ.



**ಕು। ಶುಭಶ್ರೀ ಕೆ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97 (600/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕಡಬ ಶ್ರೀ ಸುರೇಶ್ ರಾವ್ ಮತ್ತು ಶ್ರೀಮತಿ ಮಮತಾರವರ ಪುತ್ರಿ ಹಾಗೂ ಮಂಗಳೂರಿನ ಲೇಡಿಹಿಲ್ ವಿಕ್ಟೋರಿಯ ಗರ್ಲ್ಸ್ ಹೈಸ್ಕೂಲಿನ ವಿದ್ಯಾರ್ಥಿನಿ.



**ಚಿ। ಅಂಕಿತ್ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97 (606/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಗೋಪಾಲಕೃಷ್ಣ ರಾವ್ ಮತ್ತು ಶ್ರೀಮತಿ ಕವಿತಾ ರಾವ್‌ರವರ ಸುಪುತ್ರ ಹಾಗೂ ಸುರತ್ಕಲ್‌ನ ಹೋಲಿ ಫ್ಯಾಮಿಲಿ ಹೈಸ್ಕೂಲಿನ ವಿದ್ಯಾರ್ಥಿ.



**ಚಿ। ಎಸ್. ಸಂಕೇತ್ ರಾವ್** 2019–2020ನೇ ಸಾಲಿನ ಪಿ.ಯು.ಸಿ. ಪರೀಕ್ಷೆಯಲ್ಲಿ 510 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಎಸ್. ರಾಮಚಂದ್ರ ರಾವ್ ಮತ್ತು ಶ್ರೀಮತಿ ಸವಿತಾ ರಾವ್ ಶುಂಠಿಪಾಡಿ ಇವರ ಸುಪುತ್ರ ಹಾಗೂ ಮಂಗಳೂರಿನ ಎನ್.ಎಸ್.ಎ.ಎಮ್. ಪ್ರೀಯೂನಿವರ್ಸಿಟಿ ಕಾಲೇಜು, ನಂತೂರು ಇಲ್ಲಿನ ವಿದ್ಯಾರ್ಥಿ.




**ಕು। ಸೌಂದರ್ಯಲಕ್ಷ್ಮೀ** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಶೇ. 89.5 (537/600) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಪ್ರದೀಪ್ ವಿ. ರಾವ್ ಮತ್ತು ಶ್ರೀಮತಿ ರೇಖಾ ರಾವ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಅತ್ತಾವರದ ಸರೋಜಿನಿ ಮಧುಸೂದನಕುಶೆ ಕಾಲೇಜಿನ ವಿದ್ಯಾರ್ಥಿನಿ.



**ಚಿ। ಕೆ. ಚಿನ್ಮಯ ಶರ್ಮ** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 93.12% (582/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ ಗೊಂಡಿದ್ದಾನೆ. ಇವನು ಶ್ರೀ ಪ್ರವೀಣಚಂದ್ರ ಶರ್ಮ ಮತ್ತು ಶ್ರೀಮತಿ ನಯನಾ ಶರ್ಮರ ಸುಪುತ್ರ ಹಾಗೂ ಉರ್ವ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ.



**ಚಿ। ಜ್ಞಾನೇಶ್ ಯು.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 96 (604/625) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಜನಾರ್ದನ ಯು. ಮತ್ತು ಶ್ರೀಮತಿ ಪ್ರತಿಮಾರವರ ಪುತ್ರ ಹಾಗೂ ಮೂಡಬಿದಿರೆಯ ಜೈನ್ ಹೈಸ್ಕೂಲ್‌ನ ವಿದ್ಯಾರ್ಥಿ.



2020ರ ಕರ್ನಾಟಕ ರಾಜ್ಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉಡುಪಿಯ **ಕು। ಎ. ಪಲ್ಲವಿ ರಾವ್** ಇವಳು ಶೇ. 97.28% (608/625) ಅಂಕಗಳನ್ನು ಗಳಿಸಿ ಉನ್ನತಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಇವಳೂ ಸರಕಾರಿ ಪ್ರೌಢಶಾಲೆ ವಳಕಾಡು ಉಡುಪಿಯ ವಿದ್ಯಾರ್ಥಿನಿ ಆಗಿದ್ದು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯವರು ನಡೆಸಿರುವ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ 92%ನ್ನು ಗಳಿಸಿರುತ್ತಾಳೆ. ಅಂತೆಯೇ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯ ಡ್ರಾಯಿಂಗ್ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಅದಲ್ಲದೆ ಉಡುಪಿ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಯ ಕಲೋತ್ಸವದಲ್ಲಿ ಪ್ರಥಮ ಸ್ಥಾನವನ್ನು ಪಡೆದು ರಾಜ್ಯಮಟ್ಟದಲ್ಲಿ ತನ್ನ ಶಾಲೆಯನ್ನು ಪ್ರತಿನಿಧಿಸಿರುತ್ತಾಳೆ. ಇವಳು ಶ್ರೀ ಸುಭಾಸಚಂದ್ರ ರಾವ್ ಹಾಗೂ ಶ್ರೀಮತಿ ಸಂಗೀತಾರವರ ಪುತ್ರಿ.


*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

"Vijaya Nivas", Opp. Pio Mall
Bejai Church Road, Mangalore - 4



**PREETHIKA AUTOMOBILES**

2493633
9845851573

*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils



**PRAMOD AUTOMOBILES**

30 Years of Service

KARANGALPADY
MANGALORE- 575 003

Ph. : 2493633 (O)
2212723 (R)
M. : 9448260225

Wholesale & Retail Dealers in
2 & 3 WHEELERS SPARES & ACCESSORIES

Prop. : Ln. K. HARSHA KUMAR




ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

## ಧೂಪ, ದೀಪ ನೈವೇದ್ಯ ವಿಶೇಷಗಳು

**ಸೂಕ್ಷ್ಮ ತಾವ್ಯಾಪಿತೇಜ್ಞೆಯೇ ಗಂದಾದೇರುತ್ತ ರೋತ್ತರಮ್।**
**ಪ್ರತ್ಯಗಾತ್ಮಾ ವಸಾನೇಷು ಪೂರ್ವಪೂರ್ವ ಪ್ರಹಾಣತಃ ॥**

**ಅರ್ಥ :** ಗಂಧದಿಂದ ಪ್ರಾರಂಭಿಸಿ ಪ್ರತ್ಯಗಾತ್ಮನಲ್ಲಿ ಅವಸಾನವಾಗುವ ಭೂತಗಳಲ್ಲಿ ಹಿಂದು ಹಿಂದಿನದನ್ನು ಬಿಟ್ಟುಬಿಡುವುದರಿಂದ ಮುಂದು ಮುಂದಿನದು ಹೆಚ್ಚೆಚ್ಚು ಸೂಕ್ಷ್ಮವೂ, ವ್ಯಾಪ್ತಿಯೂ ಎಂದು ತಿಳಿಯಬೇಕು.

**ಹೂವುಗಳು :** ಔಷಧಿ (ಗಿಡಮೂಲಿಕೆಗಳು)ಗಳನ್ನು ಅಮೃತವೆನ್ನುವರು, ಇದರಲ್ಲಿ ಹೂವುಗಳು ಬಿಡುವುದು ಉತ್ತಮವು. ಆ ಹೂವುಗಳಿಂದ ಪೂಜೆ ಮಾಡುವ ಮನುಷ್ಯರಿಗೆ ಒಳ್ಳೆಯ ಮನಸ್ಸು ಉಂಟಾಗುತ್ತದೆ. ಅದಕ್ಕೆ ಹೂವುಗಳನ್ನು ಸುಮನಸ್ಸು (ಒಳ್ಳೆಯ ಮನಸ್ಸು) ಎನ್ನುವುದು. ಮಾನವರ ಕೋರಿಕೆಗಳನ್ನು ಒಳ್ಳೆಯ ಮನಸ್ಸಿನಿಂದ ಈಡೇರಿಸುವರು. ಅದಕ್ಕೆ ದೇವತೆಗಳೂ ಸಹ 'ಸುಮನಸ್ಸು' ಎನ್ನುವರು. ಸುವಾಸನೆ, ಒಳ್ಳೆಯ ರೂಪವುಳ್ಳ, ಬಿಳುಪು ಉಳ್ಳ, ಮುಳ್ಳು ಇಲ್ಲದ ಹೂವುಗಳೆಂದರೆ ದೇವತೆಗಳಿಗೆ ಬಹಳ ಪ್ರಿಯವಾದುದು. ತಾವರೆ, ಜಾಜಿ, ತುಳಸೀದಳಗಳು ದೇವತೆಗಳಿಗೆ ಬಹು ಇಷ್ಟವಾದುದು. ನೀರಿನಲ್ಲಿ ಹುಟ್ಟುವ ಹೂವುಗಳು ಯಕ್ಷ ರಾಕ್ಷಸರಿಗೆ ಬಹಳ ಇಷ್ಟವಾದುದು. ಶತ್ರುನಾಶಕ್ಕೆ ಅಥರ್ವಣ ಮಂತ್ರಗಳಿಂದ ಆಭಿಚಾರಕ (ಮಂತ್ರಮಾಟ) ಮಾಡುವುದಕ್ಕೆ ಮಾಂತ್ರಿಕರು ಕೆಂಪು, ಮುಳ್ಳುಗಿಡದಲ್ಲಿ ಬಿಡುವ ಹೂಗಳು, ಘಾಟುವಾಸನೆ ಸುವಾಸನೆಯಿಂದ ಕೂಡಿರುವ ಹೂಗಳನ್ನು ಉಪಯೋಗಿಸುವರು.

ಮನುಷ್ಯರಿಗೆ ಒಳ್ಳೆಯ ರೂಪವುಳ್ಳ, ಪರಿಮಳವುಳ್ಳ ಹೂವುಗಳು ಇಷ್ಟವಾಗುವುದು. ಹೂವುಗಳ ಸುವಾಸನೆಯಿಂದ ದೇವತೆಗಳು, ಅದರ ದರ್ಶನ ರೂಪದಿಂದ ಯಕ್ಷ ಭೂತಾದಿಗಳು, ಅದರ ಸ್ಪರ್ಶದಿಂದ ಸರ್ಪಗಳು – ಈ ಮೂರು ಕೆಲಸಗಳಿಂದ ಅಂದರೆ ವಾಸನೆ, ದರ್ಶನ, ಸ್ಪರ್ಶಗಳಿಂದ ಮಾನವರು ತೃಪ್ತಿಪಡುವರು. ದೇವಾಲಯಗಳಲ್ಲೂ, ಸ್ಮಶಾನಗಳಲ್ಲೂ ಇರುವ ಹೂವುಗಳು ಪೂಜೆಗಾಗಲಿ, ಶುಭಕಾರ್ಯಗಳಿಗೆ ಕೆಲಸಕ್ಕೆ ಬರುವುದಿಲ್ಲ.

**ಧೂಪಂ :** ಸಲ್ಲಕ್ಕಿ (ಒಂದು ಬಗೆಯ ಮರ) ಗಿಡದ ಚಿಗುರು ಧೂಪಕ್ಕೆ ಒಳ್ಳೆಯದು. ದೇವತೆಗಳಿಗೆ ಗುಗ್ಗುಲ ಧೂಪ ಒಳ್ಳೆಯದು. ಕರ್ಪೂರ ಧೂಪ ಇವೆಲ್ಲಕ್ಕಿಂತ ಒಳ್ಳೆಯದು. ದೇವತೆಗಳಿಗೆ ಮಧುರವಾದ ವಾಸನೆ ಧೂಪ, ಯಕ್ಷರಿಗೆ ಘಾಟು ಉಳ್ಳ ಧೂಪವು, ರಾಕ್ಷಸರಿಗೆ ಇನ್ನೂ ಘಾಟು ಇರುವ ಧೂಪಗಳು ಇಷ್ಟವಾಗುವುದು. ಯೋಗ್ಯವಾದ ಧೂಪವನ್ನು ಹಾಕಿದರೆ ದೇವತೆಗಳು ಮೆಚ್ಚಿ ಪುಷ್ಟಿ ಮತ್ತು ಆಯುಸ್ಸು ಕೊಡುವರು. ಯಕ್ಷಗಂಧರ್ವ ರಾಕ್ಷಸರು ಕೂಡಾ ಅವರಿಗೆ ಇಷ್ಟವಾದ ಧೂಪವನ್ನು ಹಾಕಿದರೆ ಇಷ್ಟವಾದ ಕೋರಿಕೆಯನ್ನು ಈಡೇರಿಸುವರು.

*(ಒಕ್ಟೋಬರ್ ಸಂಚಿಕೆಗೆ ಮುಂದುವರಿಯುವುದು)* *ಕೃಪೆ : 'ಶ್ರೀ ಶಂಕರ ಕೃಪಾ'*

## ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

**C/o. ಕೆ. ಸದಾಶಿವ ಶಾಸ್ತ್ರಿ, 3–68 (7) ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ**
**ಕುಳಾಯಿ – 575 019**

### ಪ್ರತಿಭಾ ಪುರಸ್ಕಾರ

2019–2020ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪದವಿಪೂರ್ವ (ಪಿ.ಯು.ಸಿ.) ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ಮುಂಬರುವ ದಿನಗಳಲ್ಲಿ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 15–10–2020ರ ಒಳಗಾಗಿ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ವಿನಂತಿಸುತ್ತೇವೆ.


**ಹೆಚ್ಚಿನ ಮಾಹಿತಿಗಾಗಿ : ಕೆ. ಸದಾಶಿವ ಶಾಸ್ತ್ರೀ ಮೊಬೈಲ್ : 8762235801**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಬೈಲಕೆರೆ ಕಿರಣ್** (61)ರವರು ತಾ. 29–8–2020ನೇ ಶನಿವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ ಶ್ರೀಮತಿ ಜ್ಞಾನೇಶ್ವರಿ ಮತ್ತು ಇಬ್ಬರು ಪುತ್ರಿಯರನ್ನು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***



**ಕಟೀಲು ಶಿತ್ಲ ಮನೆತನದ ಅಜಾರು ಸುಬ್ರಹ್ಮಣ್ಯ ರಾವ್** (76)ರವರು ತಾ. 31–8–2020ನೇ ಸೋಮವಾರ ಉಜಿರೆಯಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರಿಯರನ್ನು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***



**ಕರಾಡದ ವೈ. ವಿ. ಮೋಹನ ರಾವ್** (89) ತಾ. 2–9–2020ನೇ ಬುಧವಾರ ನಿಧನ ಹೊಂದಿದರು. ಇವರು ಪತ್ನಿ ಶ್ರೀಮತಿ ಇಂದಿರಾ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


Prop. : Kishore Kumar Kedige
Ph. : 2231524
M. : 9880726325

KYADIGE AUTOMOBILES
Opp. to D. P. Stores Main Road, B. C. Road, Bantwal Tq.
Dealers in : 2 & 3 WHEELERS SPARES


Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
: 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES


ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

The RIGHT Place for the RIGHT Customer
RAJESH
POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com



# ಶ್ರೀ ಅನಂತಪದ್ಮನಾಭ ವ್ರತ ಮಹಿಮೆ

ಮಾನವಕುಲಕ್ಕೆ ಶ್ರೀ ವೇದವ್ಯಾಸರು ಪಂಚಮ ವೇದವಾದ ಮಹಾಭಾರತವನ್ನು ಕೊಟ್ಟಿದ್ದಾರೆ. ಎಲ್ಲರಿಗೂ ತಿಳಿದ ಹಾಗೆ ಅವರು ರಚಿಸಿದ ಹದಿನೆಂಟು ಪುರಾಣಗಳು ಬಹಳ ಪ್ರಸಿದ್ಧಿಯಾಗಿದೆ. ಎಲ್ಲರೂ ಈ ಪುರಾಣಗಳನ್ನು ಓದಲು ಸಾಧ್ಯವಾಗುವುದಿಲ್ಲ. ಆದರೆ ಅದರಲ್ಲಿ ಅಂತರ್ಗತವಾದ ಕೆಲವು ವ್ರತಗಳನ್ನು ಆಚರಿಸುತ್ತಾರೆ. ವ್ರತಕಥೆಯನ್ನು ಪಠನ ಮಾಡುವಾಗ ಇದು ಯಾವ ಪುರಾಣದಲ್ಲಿದೆ ಮತ್ತು ಯಾರು ಯಾರಿಗೆ ಉಪದೇಶ ಮಾಡಿದರು ಅಥವಾ ಹೇಳಿದರು ಎಂಬುದಾಗಿ ತಿಳಿಯುತ್ತದೆ. ವ್ರತವನ್ನು ಮಾಡಿ ಅದರ ಕಥೆಯನ್ನು ಓದಿದರೆ, ವ್ರತದ ಪಾವಿತ್ರ್ಯತೆ, ಸಂದೇಶಗಳು ಮತ್ತು ಅದರಿಂದ ನಮಗೆ ಆಗುವ ಪ್ರಯೋಜನಗಳು ತಿಳಿಯುತ್ತದೆ.

ಶ್ರಾವಣ ಮತ್ತು ಭಾದ್ರಪದ ಮಾಸಗಳು ಹಬ್ಬ ಮತ್ತು ವ್ರತಗಳ ಸಾಲು. ಇಂತಹ ವ್ರತಗಳಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದ ವ್ರತ 'ಶ್ರೀ ಅನಂತಪದ್ಮನಾಭ ಸ್ವಾಮಿ ವ್ರತ'. ಈ ವ್ರತವನ್ನು ಕೆಲವು ಸಂಪ್ರದಾಯದವರು ಮಾತ್ರ ಆಚರಿಸುವುದನ್ನು ನಾವು ಕಾಣಬಹುದು. ಈ ವ್ರತವನ್ನು ಭಾದ್ರಪದ ಮಾಸದ ಶುಕ್ಲ ಚತುರ್ದಶಿಯಂದು ಆಚರಿಸಲಾಗುತ್ತದೆ. ಶೃಂಗೇರಿ ಮಠದಲ್ಲಿಯೂ ಆಚರಿಸಲಾಗುತ್ತದೆ. ಈ ವ್ರತದ ವಿವರಣೆ 'ಭವಿಷ್ಯೋತ್ತರ' ಪುರಾಣದಲ್ಲಿ ಅಂತರ್ಗತವಾಗಿದೆ ಮತ್ತು ಈ ವ್ರತದ ಮಹಿಮೆಯನ್ನು ಶ್ರೀಕೃಷ್ಣನು ವನವಾಸ ಕಾಲದಲ್ಲಿದ್ದ ಧರ್ಮರಾಯನಿಗೆ ಹೇಳಿದನು ಎಂದು ವ್ರತಕಥೆಯಿಂದ ತಿಳಿದುಬರುತ್ತದೆ ಹಾಗೂ ಶ್ರೀಕೃಷ್ಣನ ಸ್ವರೂಪವೇ 'ಅನಂತಪದ್ಮನಾಭ ಸ್ವಾಮಿ' ಎಂದು ಹೇಳುತ್ತಾನೆ. ಇಲ್ಲಿ ಯಾವ ವ್ರತವನ್ನು ಆಚರಿಸಿದರೂ, ಶ್ರದ್ಧೆ, ಭಕ್ತಿ ಮತ್ತು ತನ್ಮಯತೆ ಮುಖ್ಯ. ಪೂಜೆಗೆ ಆಡಂಬರದ ಅಗತ್ಯವಿಲ್ಲ. ಪರಮಾತ್ಮನೇ ಗೀತೆಯಲ್ಲಿ ಹೇಳಿರುವಂತೆ –

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತ ಮಶ್ನಾಮಿ ಪ್ರಯತಾತ್ಮನಃ ॥**

ಈ ವ್ರತವು ಬಹಳ ವಿಶೇಷವಾದುದು. ಇಲ್ಲಿ 'ಯಮುನಾ' ಪೂಜೆಯನ್ನು ಆಚರಿಸಿ, ಅನಂತರ ಕಲಶದಲ್ಲಿ ಆಹ್ವಾನಿತವಾದ ಯಮುನಾ ನದಿಯ ಜಲವನ್ನು ಉಪಯೋಗಿಸಿಕೊಂಡು ಪೂಜೆಯನ್ನು ಆಚರಿಸುತ್ತಾರೆ. ಇಲ್ಲಿ ಎರಡು ಕಲಶಗಳನಿಟ್ಟು, ಆ ಕಲಶಗಳಲ್ಲಿ ಪೂಜಿಸಲ್ಪಟ್ಟ ಯಮುನಾ ಜಲವನ್ನು ಹಾಕಿ, ಒಂದೊಂದು ಕಲಶದ ಮೇಲೆ ಒಂದೊಂದು ತೆಂಗಿನಕಾಯಿಯನ್ನಿಟ್ಟು, ವಸ್ತ್ರವನ್ನು ಹೊದಿಸಿ, ದರ್ಭೆಯಲ್ಲಿ ಹೆಣೆದ ಏಳು ಶಿರಸ್ಸುಗಳುಳ್ಳ ಸರ್ಪಾಕಾರ ರೂಪದಲ್ಲಿ ಅನಂತನನ್ನು ಕಟ್ಟಿ ಕಲಶಗಳ ಮಧ್ಯೆ ಇಟ್ಟು ಎಲ್ಲಾ ಪೂಜೆಗಳಂತೆ ಶ್ರೀ ಗಣಪತಿ ಪೂಜೆಯನ್ನು ಮಾಡಿ ಪ್ರಾಣಪ್ರತಿಷ್ಠೆಯನ್ನು ಮಾಡಿ ಷೋಡಶೋಪಚಾರ ಪೂಜೆಯನ್ನು ಮಾಡುವ ಸಂಪ್ರದಾಯವಿದೆ. ಇದು ಬಹಳ ಪವಿತ್ರವಾದ ವ್ರತ. ಇದನ್ನು ಅವರವರ ಪದ್ಧತಿಯಂತೆ ಉಪನಯನ ಅಥವಾ ವಿವಾಹದ ನಂತರ ಆಚರಿಸುತ್ತಾರೆ.

ಈ ವ್ರತದ ವಿಶೇಷವೆಂದರೆ ಸಂಖ್ಯೆ 'ಹದಿನಾಲ್ಕು'. 14 ಗಂಟುಗಳುಳ್ಳ (ಗ್ರಂಥಿ) ದೋರದ ಪೂಜೆ, 13 ವರ್ಷಗಳು ವ್ರತವನ್ನು ಆಚರಿಸಿ 14ನೆಯ ವರ್ಷದಲ್ಲಿ ಉದ್ಯಾಪನೆಯನ್ನು ಮಾಡುತ್ತಾರೆ ಮತ್ತು ವ್ರತದ ಆಚರಣೆ ಮುಂದುವರಿಸುತ್ತಾರೆ. ಇದರಿಂದ ಮುಂದಿನ ಪೀಳಿಗೆ ಮುಂದುವರಿಸಲು ಅನುಕೂಲವಾಗುತ್ತದೆ. ಇಲ್ಲಿ ವಿಶೇಷವೆಂದರೆ ನವಶಕ್ತಿಪೂಜೆ, ದಿಕ್ಪಾಲಕಪೂಜೆ ಹಾಗೂ 14 ಆವರಣ ಪೂಜೆಯಲ್ಲಿ ವಿವಿಧ ದೇವತೆಗಳನ್ನು ಆಹ್ವಾನಿಸಿ ಪ್ರತಿ ಆವರಣ ಪೂಜೆಯಲ್ಲಿ –

**"ದಯಾಬ್ಧೇ ತ್ರಾಹಿ ಸಂಸಾರ ಸರ್ಪಾನ್ಮಾಂ ಶರಣಾಗತಂ ।**
**ಭಕ್ತ್ಯಾ ಸಮರ್ಪಯೇ ತುಭ್ಯಂ" ಪ್ರಥಮಾವರಣ... ಚತುರ್ದಶಾವರಣಾರ್ಚನಂ ಸಮರ್ಪಯಾಮಿ"**

ಎಂದು ಹೇಳಿಕೊಂಡು ಶಂಖೋದಕ ಸಹಿತ ವಿವಿಧ ಪತ್ರೆ ಮತ್ತು ಪುಷ್ಪಗಳಿಂದ ಪೂಜೆ ಮಾಡುತ್ತಾರೆ. ಎಲ್ಲಾ ಪೂಜಾವಿಧಿಗಳನ್ನು ಪೂರ್ಣಗೊಳಿಸಿ 'ದೋರ ಬಂಧನಮ್' ಪೂಜಿಸಿದ ಈ ಪವಿತ್ರವಾದ ದಾರವನ್ನು ಪತ್ನಿಸಮೇತ ಧರಿಸಿ ಧನ್ಯರಾಗುತ್ತಾರೆ. ಕಳೆದ ವರ್ಷದ ದಾರವನ್ನು ವಿಸರ್ಜಿಸುತ್ತಾರೆ. ಈ ರೀತಿ ಅವಿಚ್ಛಿನ್ನವಾಗಿ ಈ ವ್ರತದ ಆಚರಣೆ ನಡೆಯುತ್ತದೆ.

ವಿವಿಧ ಹೆಸರುಗಳಿಂದ ಕರೆಯಲ್ಪಡುವ ಆದಿಶೇಷನ ಮೇಲೆ ಪವಡಿಸಿರುವ 'ಅನಂತಪದ್ಮನಾಭ' ರೂಪವಿರುವ ದೇವಾಲಯಗಳನ್ನು, ತಿರುಪತಿಯ ಗೋವಿಂದರಾಜ ಸ್ವಾಮಿ, ಶ್ರೀರಂಗ – ಶ್ರೀರಂಗಪಟ್ಟಣ ಮತ್ತು ಇನ್ನೂ ಅನೇಕ ಯಾತ್ರಾಸ್ಥಳಗಳಲ್ಲಿ ನಾವು ದರ್ಶಿಸಬಹುದು. ನಾವು ಅನಂತನಿಗೆ ಮೀಸಲಾಗಿರುವ ಶ್ರೀ ಶಂಕರರು ಜನಿಸಿದ ಕೇರಳ ರಾಜ್ಯದಲ್ಲಿರುವ ತಿರುವನಂತಪುರದಲ್ಲಿರುವ ಬೃಹದಾಕಾರವಾದ ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಅನಂತರೂಪವಾದ 'ಶ್ರೀ ಅನಂತಪದ್ಮನಾಭ ಸ್ವಾಮಿ'ಯನ್ನು ದರ್ಶಿಸಿ ಧನ್ಯರಾಗಬಹುದು.

ಈ ವ್ರತವು ಕೌಂಡಿನ್ಯ ಮತ್ತು ಸುಶೀಲೆ ದಂಪತಿಗಳ ಮುಖಾಂತರ ಪ್ರಚಲಿತ ಮತ್ತು ಪ್ರಸಿದ್ಧವಾಯಿತು. ಈ ವ್ರತವನ್ನು ಮಾಡಿದ ಪ್ರಭಾವದಿಂದ ದಂಪತಿಗಳು ಅನಂತವಾದ ಸರ್ವಸಂಪತ್ತುಗಳನ್ನು ಪಡೆದರು. ಕೆಲವು ಸಮಯದ ಅನಂತರ ದುರದೃಷ್ಟವಶಾತ್, ಅಹಂಕಾರದಿಂದ ಎಲ್ಲವನ್ನು ಕಳೆದುಕೊಂಡು ದರಿದ್ರನಾಗಿ ಎಲ್ಲರಿಂದ ದೂಷಿತಗೊಂಡು ಮತ್ತು ತಿರಸ್ಕೃತನಾಗಿ ಕೌಂಡಿನ್ಯನು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ತನ್ನ ತಪ್ಪಿನ ಅರಿವಾಗಿ ಮಹಾಮಹಿಮಾನ್ವಿತನಾದ 'ಅನಂತ'ನನ್ನು ಹುಡುಕಿಕೊಂಡು ಕಾಡಿನಲ್ಲಿ ಅಲೆಯುತ್ತಾ ಎಲ್ಲರಲ್ಲಿಯೂ ನೀವು ಅನಂತನನ್ನು ಕಂಡಿರಾ? ಎಂದು ಅನೇಕರನ್ನು ಕೇಳುತ್ತಾನೆ. ಅದರಲ್ಲಿ –

1. ಹೂವು, ಕಾಯಿ, ಹಣ್ಣುಗಳಿದ್ದ ಮಾವಿನಮರ – ಅಲ್ಲಿ ಯಾವ ಪಕ್ಷಿ ಅಥವಾ ಕ್ರಿಮಿಗಳು ಸಂಚಾರ ಮಾಡುತ್ತಿರಲಿಲ್ಲ. 2. ಎಳೇಕರುವಿನೊಡನೆ ಕೂಡಿಕೊಂಡಿರುವ ಹಸಿಹುಲ್ಲಿನ ಮಧ್ಯೆ ಇದ್ದರೂ, ಹುಲ್ಲನ್ನೂ ತಿನ್ನದೆ ಅಲ್ಲಿ ಇಲ್ಲಿ ತಿರುಗಾಡುತ್ತಾ ಇದ್ದ ಆಕಳು. 3. ಹಚ್ಚಗಿರುವ ಹುಲ್ಲಿನಲ್ಲಿ ನಿಂತಿರುವ ವೃಷಭನನ್ನು ನೋಡಿದನು. 4. ಒಂದರಿಂದ ಒಂದಕ್ಕೆ ಪ್ರವಹಿಸುತ್ತಿರುವ ಅಲೆಗಳುಳ್ಳ ಅತ್ಯಂತ ಮನೋಹರವಾದ ಪುಷ್ಕರಣೀದ್ವಯವನ್ನು ನೋಡಿದನು 5. ಮುಂದೆ ಒಂದು ಕತ್ತೆಯನ್ನೂ, ಆನೆಯನ್ನೂ ನೋಡಿದನು. ಯಾರನ್ನು ಕೇಳಿದರೂ ತಾವು ಅನಂತಪದ್ಮನಾಭನನ್ನು ನೋಡಲಿಲ್ಲ ಎಂದು ಹೇಳುತ್ತಾರೆ. ಕೌಂಡಿನ್ಯ ಮಹಾಮುನಿಯು ಅತ್ಯಂತ ದುಃಖಿತನಾಗಿ ಮೂರ್ಛೆಹೋದನು. ಕೊನೆಗೆ ಪರಮಾತ್ಮನಾದ ಅನಂತನು ವೃದ್ಧ ಬ್ರಾಹ್ಮಣನಂತೆ ಬಂದು ಪ್ರತ್ಯಕ್ಷನಾಗಿ ತನ್ನ ನಿಜರೂಪದಿಂದ ಶಂಖ, ಚಕ್ರ, ಗದಾಧಾರಿಯಾಗಿ ದರ್ಶನವನ್ನು ಕೊಡುತ್ತಾನೆ. ಇದೇ ಭಗವಂತನ ಲೀಲೆ, ಭಕ್ತರನ್ನು ಪರೀಕ್ಷಿಸಿ ಅವರನ್ನು ಪಕ್ವಮಾಡುತ್ತಾನೆ. ಕೌಂಡಿನ್ಯನು ಆನಂದಭಾಷ್ಪದಿಂದ ಪರಮಾತ್ಮನಾದ ಅನಂತನನ್ನು ನಾನಾವಿಧವಾಗಿ ಸ್ತೋತ್ರವನ್ನು ಮಾಡಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ವಿಧವಿಧವಾಗಿ ಬೇಡಿಕೊಳ್ಳುತ್ತಾನೆ. ಭಗವಂತ ಭಕ್ತಪರಾಧೀನನಲ್ಲವೇ. ಪ್ರಸನ್ನನಾಗಿ ಎಲ್ಲವನ್ನೂ ಕರುಣಿಸಿ, ಧರ್ಮಮಾರ್ಗದಿಂದ ಪ್ರವರ್ತಿಸುವಂತೆ ಮತ್ತು ಅಂತ್ಯಕಾಲದಲ್ಲಿ ಶಾಶ್ವತ ವಿಷ್ಣುಲೋಕವನ್ನು ಹೊಂದುವಂತೆ ವರಗಳನ್ನು ಕೊಟ್ಟು ರಕ್ಷಿಸುತ್ತಾನೆ.

ಆಗ ಕೌಂಡಿನ್ಯನು ಸ್ವಾಮಿಯನ್ನು ತಾನು ಕಂಡ ಮಾವಿನಮರ, ಹಸು, ಕರು, ವೃಷಭ, ಪುಷ್ಕರಣಿ, ಗರ್ದಭ, ಆನೆಯ ವಿಚಾರವಾಗಿ ಕೇಳಲಾಗಿ, ಪರಮಾತ್ಮನು –

1. ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಸಕಲ ವಿದ್ಯೆಗಳನ್ನು ಓದಿಕೊಂಡು ಗರ್ವಿಸಿ ಯಾವ ಶಿಷ್ಯರಿಗೂ ಹೇಳದೆ ಹೋದದ್ದರಿಂದ ಅಡವಿಯಲ್ಲಿ ಯಾರಿಗೂ ಉಪಯೋಗವಿಲ್ಲದ ಮಾವಿನಮರವಾಗಿ ನಿಂತಿರುವನು.
2. ಪೂರ್ವದಲ್ಲಿ ಒಬ್ಬ ಮಹಾಭಾಗ್ಯವಂತನಾದರೂ, ತಾನೂ ತಿನ್ನದೆ ಇತರರಿಗೂ ಅನ್ನದಾನವನ್ನು ಮಾಡಲಿಲ್ಲ. ಆದಕಾರಣ ಹುಲ್ಲು ತಿನ್ನಲು ಬಾಯಿಯಿಲ್ಲದೆ ಆಕಳಾಗಿ ಜನಿಸಿ ನಿಂತಿದ್ದಾನೆ.
3. ಹಿಂದಿನ ಜನ್ಮದಲ್ಲಿ ಒಬ್ಬ ಶ್ರೀಮಂತನು ಗರ್ವಿಸಿ ಬ್ರಾಹ್ಮಣರಿಗೆ ಊಳರ ಭೂಮಿಯನ್ನು ದಾನ ಕೊಟ್ಟನಾದ್ದರಿಂದ ಆತನು ವೃಷಭನಾಗಿ ಕಾಡಿನಲ್ಲಿ ಅಂಡಲೆಯುತ್ತಿದ್ದಾನೆ.
4. ನೀನು ಕಂಡ ಸರಸ್ಸುಗಳು ಒಂದು ಧರ್ಮ, ಮತ್ತೊಂದು ಅಧರ್ಮ.
5. ಒಬ್ಬ ಪುರುಷನು ಪೂರ್ವಜನ್ಮದಲ್ಲಿ ಪರನಿಂದೆ ಮಾಡುತ್ತಾ ಇದ್ದಕಾರಣ, ಅವನು ಗರ್ದಭನಾಗಿ ಜನಿಸಿದನು. ಆನೆಯು ಪೂರ್ವದಲ್ಲಿ ತಮ್ಮ ಹಿರಿಯರು ಮಾಡಿದ ಧರ್ಮವನ್ನು ವಿಕ್ರಯಿಸಿದ ಕಾರಣ ಆನೆಯಾಗಿ ಹುಟ್ಟಿರುವನು.

ನೀನು ಪತ್ನಿಯ ಸಹಿತ ವ್ರತವನ್ನು ಮಾಡಿ, 14 ಸಂವತ್ಸರಗಳು ಆಚರಿಸು. ಅನಂತರ ನಾನು ಸಂತುಷ್ಟನಾಗಿ ನಿನಗೆ ನಕ್ಷತ್ರ ಸ್ಥಾನವನ್ನು ಕೊಡುತ್ತೇನೆ ಎಂದು ವರಗಳನ್ನು ಕೊಡುತ್ತಾನೆ. ಕೌಂಡಿನ್ಯನು ಪರಮಾತ್ಮನ ಆಣತಿಯಂತೆ ಎಲ್ಲವನ್ನು ಆಚರಿಸಿ ಸಾಯುಜ್ಯವನ್ನು ಪಡೆಯುತ್ತಾನೆ. ಈ ರೀತಿ ಶ್ರೀ ಅನಂತಪದ್ಮನಾಭ ವ್ರತವು ಪ್ರಚಲಿತವಾಯಿತು.

ಈ ಕಥೆಯನ್ನು ಭಕ್ತಿ–ಶ್ರದ್ಧೆಯಿಂದ ಓದಿ ಶ್ರವಣಮಾಡಿದರೆ ನಾವು ಎಲ್ಲ ರೀತಿಯ ವಿಷಯಗಳನ್ನು ಗ್ರಹಿಸಿ, ಪ್ರಯೋಜನಗಳನ್ನು ತಿಳಿಯಬಹುದು. ದಾನವು ಹೇಗಿರಬೇಕು ಮತ್ತು ಯಾವ ರೀತಿಯಲ್ಲಿರಬೇಕೆಂದು ತಿಳಿಯುತ್ತದೆ. ಅನ್ನದಾನ ಮತ್ತು ವಿದ್ಯಾದಾನಗಳು ಬಹಳ ಶ್ರೇಷ್ಠವಾದುದು. ಇದರ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆದರೆ ವಿದ್ಯಾದಾನವು ಬಹಳ ಪವಿತ್ರವಾದುದು ಎಂಬುದನ್ನು ಅನೇಕ ಸುಭಾಷಿತಗಳಿಂದ ತಿಳಿಯಬಹುದು.

**ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್ ।**
**ಅನ್ನೇನ ಕ್ಷಣಿಕಾ ತೃಪ್ತಿರ್ಯಾವಜ್ಜೀವಂ ಚ ವಿದ್ಯಯಾ ॥**

ಅನ್ನದಾನ ಪರಮದಾನ. ಅದಕ್ಕಿಂತ ಹಿರಿದಾದುದು ವಿದ್ಯಾದಾನ. ಕಾರಣ ಅನ್ನವು ಕ್ಷಣಿಕ ತೃಪ್ತಿಕೊಡುತ್ತದೆ. ಆದರೆ ವಿದ್ಯೆಯು ತನ್ನ ಜೀವಿತಕಾಲ ಪೂರ್ತಿ ಸುಖವನ್ನು ಕೊಡುತ್ತದೆ ಹಾಗೂ ವಿದ್ಯೆಯನ್ನು ಯಾರೂ ಅಪಹರಿಸಲಾಗದು ಮತ್ತು ವಿದ್ವಾಂಸನಿಗೆ ಎಲ್ಲ ಕಡೆಯೂ ಗೌರವ ದೊರೆಯುತ್ತದೆ.

ದಾನವನ್ನು ಮಾಡಬೇಕಾದರೆ, ಪತ್ನಿಯು ತನ್ನ ಅಭಿಮತಪೂರ್ವಕವಾಗಿ ಒಂದು ತೊಟ್ಟು ನೀರನ್ನು ಹಾಕುತ್ತಾಳೆ. ಆಗಲೇ ಆ ದಾನಕ್ಕೆ ಫಲ. ಯಾವ ದಾನವನ್ನು ಕೊಟ್ಟರೂ ಅದು ನನ್ನದಲ್ಲ, ದಾನ ತೆಗೆದುಕೊಳ್ಳುವವರದ್ದು 'ನಮಮ' ಎಂಬ ಭಾವನೆಯಿಂದ ಕೊಡಬೇಕು. ಉಪಾಯನದಾನ ವ್ರತ ಅಥವಾ ಪೂಜೆಗಳ ಅನಂತರ ಪೂಜೆ ಮಾಡಿಸಿದ ಪುರೋಹಿತನಿಗೆ ದಾನವನ್ನು ಕೊಡಬೇಕು. ಇದನ್ನು 'ಉಪಾಯನದಾನ'ವೆಂದು ಕರೆಯುತ್ತಾರೆ. **"ಇದಂ ಉಪಾಯನದಾನಂ ಬ್ರಾಹ್ಮಣಾಯ...** (ಆಯಾಯ ವ್ರತದ ಪ್ರಕಾರ) **ಸ್ವರೂಪಾಯ ತುಭ್ಯಮಹಂ ಕಾಮಯಮಾನಃ ಸಂಪ್ರದದೇ ನಮಮ ನಮಮ"** ಇದರಿಂದ ಪೂಜೆಯ ಫಲ ದೊರೆಯುತ್ತದೆ. ಇದೇ ನಮಗೆ ಹಿರಿಯರಿಂದ ಬಂದ ಬಳುವಳಿ. ನಾವೆಲ್ಲರೂ ಶ್ರೀ ಅನಂತಪದ್ಮನಾಭನನ್ನು ಸ್ಮರಿಸಿ ಧನ್ಯರಾಗೋಣ.

**– ಶ್ರೀ ಬಿ. ಆರ್. ಶ್ರೀಕಂಠಯ್ಯ, ಬೆಂಗಳೂರು**
**ಕೃಪೆ : 'ಶ್ರೀ ಶಂಕರ ಕೃಪಾ'**




## ಜ್ಞಾನ – ನುಡಿ

ನಮ್ಮ ದೇಶದಲ್ಲಿ ತ್ಯಾಗಿಗಳೆಂದು ತೋರಿಸಿಕೊಳ್ಳುವುದು ಬಹಳ ಲಾಭದಾಯಕ ಉದ್ಯೋಗವಾಗಿದೆ.

**– ಎಂ. ಗೋಪಾಲಕೃಷ್ಣ ಅಡಿಗ**

## ಜ್ಞಾನ – ಗಾದೆ

- ತಿಕ್ಕಿನಾಕ್ಲೊಟ್ಟಿಗೆ ತಿರುಗುನಾಯೆ ಇಲ್ಲ್‌ನ್ ಸೂವಯೆ.
- ತಿಪ್ಪಿತ ನೀರ್ ಪಿಜಿನ್‌ಗ್ ಕಡಲ್.
- ತಿರ್ಗೆಲ್ ನಾಯಿ ಇಲ್ಲ್ ಕಾಪನ್.

## ಜ್ಞಾನ – ನಗೆ

**ಹೆಂಡತಿ :** ರೀ, ಮದುವೆಯಾಗಿ ಹೇಗೆ ಇಪ್ಪತ್ತು ವರ್ಷ ಕಳೆದುಹೋದವು ಅಂತ ಗೊತ್ತೇ ಆಗಲಿಲ್ಲ.

**ಗಂಡ :** ಹೌದು ಕಣೇ, ಶಿಕ್ಷೆಯ ಅನುಭವ ಆಗುವುದು ಕೈದಿಗೆ ಮಾತ್ರ ಜೈಲರ್‌ಗಲ್ಲ!

## ಜ್ಞಾನ – ವಿಸ್ಮಯ

- ಅತೀ ದೊಡ್ಡ ವಾಚನಾಲಯ – **ವೆನಿಸ್ ವಾಚನಾಲಯ**
- ಭಾರತದ ಪ್ರಥಮ ಅಂಚೆ ವ್ಯವಸ್ಥೆ – ***1837***
- ಭಾರತದ ಪ್ರಥಮ ಆಕಾಶವಾಣಿ ಕಾರ್ಯಕ್ರಮ ಪ್ರಸಾರ – ***1927***

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*